# ಕಾರವಲ್

ESTD:1976

16. 11. 2022 ಬುಧವಾರ, ತುಲಾ 30


## ರೇಶನ್ ಸಾಮಗ್ರಿಗಳು ಕಾಳಸಂತೆಯಲ್ಲಿ

ರೇಶನ್ ಸಾಮಗ್ರಿಗಳನ್ನು ಕಾಳಸಂತೆಯಲ್ಲಿ ಮಾರಾಟ ನಡೆಸಲಾಗುತ್ತಿದೆ ಎಂಬ ಆರೋಪ ಹೊಸತೇನಲ್ಲ. ಆದ್ದರಿಂದಲೇ ಈ ವಿಷಯದಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಗುಪ್ತ ಮಾಹಿತಿಯ ಅಗತ್ಯವಿಲ್ಲ. ನಿತ್ಯೋಪಯೋಗಿ ಸಾಮಗ್ರಿ ವ್ಯಾಪಾರ ನಡೆಯುವ ಅಂಗಡಿಯಲ್ಲಿ ತಪಾಸಣೆ ನಡೆಸಿದರೆ ರೇಶನ್ ಸಾಮಗ್ರಿಗಳನ್ನು ಪತ್ತೆಹಚ್ಚಲು ಸಾಧ್ಯವಿದೆ. ಆದರೆ ಆ ಕ್ರಮ ಅಧಿಕಾರಿಗಳ ಭಾಗದಿಂದ ಉಂಟಾಗುತ್ತಿಲ್ಲ ಎಂಬುವುದು ಸತ್ಯ ಸಂಗತಿ. ಆದರೆ ಅಪರೂಪಕ್ಕಾದರೂ ಕ್ರಮ ಉಂಟಾಗುವುದಿದೆ. ಈ ರೀತಿಯ ಕ್ರಮದ ಅಂಗವಾಗಿ ಮೊನ್ನೆ ಮಂಜೇಶ್ವರದ ಬಾಯಿಕಟ್ಟೆಯಲ್ಲಿ ತಪಾಸಣೆ ನಡೆಸಲಾಗಿದೆ. ಬಾಯಿಕಟ್ಟೆಯ ಒಂದು ಅಂಗಡಿಯಲ್ಲಿ ಮಂಜೇಶ್ವರ ತಾಲೂಕು ಸಪ್ಲೈ ಆಫೀಸರ್ ಕೆ.ಪಿ. ಸಜಿಮೋನ್‌ರ ನೇತೃತ್ವದಲ್ಲಿ ನಡೆಸಿದ ತಪಾಸಣೆಯಲ್ಲಿ ಅನಧಿಕೃತವಾಗಿ ದಾಸ್ತಾನಿರಿಸಲಾಗಿದ್ದ 641 ಕಿಲೋ ರೇಶನ್ ಬೆಳ್ತಿಗೆ ಅಕ್ಕಿ ಹಾಗೂ 75 ಕಿಲೋ ರೇಶನ್ ಕುಚ್ಚಿಲಕ್ಕಿ ವಶಪಡಿಸಲಾಗಿದೆ. ಬಾಯಿಕಟ್ಟೆಯ ಮತ್ತೊಂದು ಅಂಗಡಿಯಲ್ಲಿ ನಡೆಸಿದ ತಪಾಸಣೆಯಲ್ಲಿ 117 ಕಿಲೋ ಬೆಳ್ತಿಗೆ ಅಕ್ಕಿಯನ್ನೂ ಪತ್ತೆಹಚ್ಚಿ ವಶಪಡಿಸಲಾಗಿದೆ. ಈ ಎರಡು ಅಂಗಡಿಗಳ ಮಾಲಕರ ವಿರುದ್ಧ ಅಗತ್ಯ ಸಾಮಗ್ರಿ ದುರುಪಯೋಗ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವುದಾಗಿ ಅಧಿಕಾರಿಗಳು ಮುನ್ನೆಚ್ಚರಿಕೆ ನೀಡಿ ಮರಳಿದ್ದಾರೆ.

ರೇಶನ್ ಅಕ್ಕಿ ಬಹುತೇಕ ಅಂಗಡಿಗಳಲ್ಲೂ ಮಾರಾಟಗೈಯ್ಯಲಾಗುತ್ತಿದೆ ಎಂಬ ವಿಷಯ ಎಲ್ಲರಿಗೂ ತಿಳಿದಿರುವುದೇ ಆಗಿದೆ. ಅಂತಹ ಎರಡು ಅಂಗಡಿಗಳಲ್ಲಾದರೂ ತಪಾಸಣೆ ನಡೆಸಿ ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆ ಸಮಾಧಾನ ಪಟ್ಟುಕೊಳ್ಳಬಹುದಾಗಿದೆ. ರೇಶನ್ ಅಂಗಡಿಗಳಿಂದ ಲಭಿಸುವ ಅಕ್ಕಿಯನ್ನು ಕಾರ್ಡ್ ಮಾಲಕರು ನೀಡಿರುವುದಾಗಿ ಅಂಗಡಿ ಮಾಲಕರು ತಪಾಸಣೆ ನಡೆಸಿದ ಅಧಿಕಾರಿಗಳಲ್ಲಿ ತಿಳಿಸಿದ್ದಾರೆ. ಈ ಹಿಂದಿನಂತೆ ರೇಶನ್ ಸಾಮಗ್ರಿಗಳನ್ನು ಕಾಳಸಂತೆಗೆ ತಲುಪಿಸಲು ಸಾಧ್ಯವಾಗದ ಸ್ಥಿತಿ ಇದೀಗಿನದ್ದು. ಹಾಗಿದ್ದರೂ ಭಾರೀ ಪ್ರಮಾಣದಲ್ಲಿ ರೇಶನ್ ಅಕ್ಕಿ ಅಂಗಡಿಗಳಿಗೆ ಹೇಗೆ ತಲುಪಿತು ಎಂಬ ಬಗ್ಗೆ ತನಿಖೆ ನಡೆಸಬೇಕಾಗಿದೆ. ಈ ರೀತಿಯ ತಪಾಸಣೆ ನಡೆಸುವುದರಿಂದ ಒಂದು ಕುಟುಂಬಕ್ಕೆ ಅಗತ್ಯವಿರುವುದಕ್ಕಿಂತಲೂ ಹೆಚ್ಚು ಪ್ರಮಾಣದಲ್ಲಿ ರೇಶನ್ ಸಾಮಗ್ರಿಗಳು ಲಭಿಸುತ್ತಿದೆಯೆಂದೂ ಅಂತಹ ಸಾಮಗ್ರಿಗಳನ್ನು ಖಾಸಗಿ ಅಂಗಡಿಗಳಲ್ಲಿ ಲಭಿಸಿದ ಬೆಲೆಗೆ ನೀಡಿ ಆ ವತಿಯಿಂದ ಲಭಿಸುವ ಹಣವನ್ನು ಉಪಯೋಗಿಸಿ ಇತರ ಸಾಮಗ್ರಿಗಳನ್ನು ಖರೀದಿಸಲಾಗುತ್ತಿದೆ ಎಂದು ತಿಳಿಯಲು ಸಾಧ್ಯವಿದೆ. ಒಬ್ಬ ವ್ಯಕ್ತಿಗೆ ಅಥವಾ ಒಂದು ಕುಟುಂಬಕ್ಕೆ ಅಕ್ಕಿ ಮಾತ್ರ ತಿಂದು ಜೀವಿಸಲು ಸಾಧ್ಯವಿಲ್ಲವೆಂದೂ ಇತರ ಅಗತ್ಯ ವಸ್ತುಗಳು ಕೂಡ ಬೇಕು ಎಂಬುವುದು ಸತ್ಯ. ಆದ್ದರಿಂದ ಹೆಚ್ಚುವರಿಯಾಗಿ ಉಳಿದಿರುವ ಅಕ್ಕಿಯನ್ನು ಅವರು ಕಡಿಮೆ ಬೆಲೆಗೆ ಅಂಗಡಿಗಳಿಗೆ ಮಾರಾಟ ನಡೆಸುತ್ತಾರೆ. ಆದರೆ ಇದೇ ಅಕ್ಕಿ ಅಗತ್ಯವುಳ್ಳವರ ಕೈಗೆ ತಲುಪುವಾಗ ಕಿಲೋಕ್ಕೆ 30ರಿಂದ 36 ರೂ. ವರೆಗೆ ಬೆಲೆ ನೀಡಬೇಕಾಗಿ ಬರುತ್ತದೆ. ಇತ್ತೀಚೆಗೆ ಅಕ್ಕಿ ಮಾರುಕಟ್ಟೆಯಲ್ಲಿ ಉಂಟಾಗಿರುವ ಬೇಡಿಕೆಯೇ ಅಕ್ಕಿಗೆ ಬೆಲೆ ಏರಿಕೆಯಾಗಲು ಕಾರಣವಾಗಿದೆ. ಈ ಮೂಲಕ ಕೊಳ್ಳೆ ಲಾಭ ಗಳಿಸುವುದು ಮಧ್ಯವರ್ತಿಗಳಾಗಿದ್ದಾರೆ. ಹಲವು ಯೋಜನೆಗಳ ಮೂಲಕ ರೇಶನ್ ಅಕ್ಕಿ ಲಭಿಸುವ ಕುಟುಂಬಗಳು ಇದಕ್ಕೆ ಕಾರಣವಾಗುತ್ತಾರೆ. ಜೊತೆಗೆ ಇತರ ಅಗತ್ಯ ವಸ್ತುಗಳ ಲಭ್ಯತೆಯನ್ನು ಖಚಿತಪಡಿಸಬೇಕು. ರೇಶನ್ ಸಾಮಗ್ರಿಗಳು ಕಾಳಸಂತೆಯಲ್ಲಿ ಲಭಿಸುವ ಪರಿಸ್ಥಿತಿಯನ್ನು ಹೋಗಲಾಡಿಸಬೇಕು. ಇಲ್ಲದಿದ್ದಲ್ಲಿ ಬಡವರ ಹೆಸರಲ್ಲಿ ಮಧ್ಯವರ್ತಿಗಳು ಕೊಳ್ಳೆ ಲಾಭ ಗಳಿಸುವುದು ಮಾತ್ರವಲ್ಲದೆ ಅದು ಕೃತಕ ಅಕ್ಕಿ ಕ್ಷಾಮ ಸೃಷ್ಟಿಸಿ ಬೆಲೆಯೇರಿಕೆ ಮಾಡಲು ದಾರಿ ಮಾಡಿಕೊಡಲಿದೆ. ಆದ್ದರಿಂದ ಸರಿಯಾಗಿ ಚಿಂತಿಸಿ, ನಿರ್ಧರಿಸಬೇಕಾದದ್ದು ಕೇಂದ್ರ ಹಾಗೂ ರಾಜ್ಯ ಸರಕಾರಗಳಾಗಿವೆ.

## ಮುಖ್ಯಮಂತ್ರಿಯಾಗಿ ನಿರಂತರವಾಗಿ ಮುಂದುವರಿದ ದಾಖಲೆ ಪಿಣರಾಯಿ ವಿಜಯನ್‌ರ ಹೆಸರಲ್ಲಿ

ತಿರುವನಂತಪುರ: ನಿರಂತರವಾಗಿ ಅತೀ ಹೆಚ್ಚು ಕಾಲ ಕೇರಳವನ್ನು ಆಲಿದ ಮುಖ್ಯಮಂತ್ರಿ ಎಂಬ ದಾಖಲೆ ಹಾಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್‌ರ ಹೆಸರಲ್ಲಿ ದಾಖಲುಗೊಂಡಿದೆ.

ಪಿಣರಾಯಿ ವಿಜಯನ್ ಮುಖ್ಯಮಂತ್ರಿ ಸ್ಥಾನದಲ್ಲಿ 2365ಕ್ಕಿಂತ ಹೆಚ್ಚು ದಿನ ಮುಂದರಿದಿದ್ದು, ಆ ಮೂಲಕ ಅವರು ಮಾಜಿ ಮುಖ್ಯಮಂತ್ರಿ ದಿ। ಸಿ. ಅಚ್ಯುತ ಮೆನೊನ್ ಅವರ ಹೆಸರಲ್ಲಿದ್ದ ದಾಖಲೆ ಮುರಿದಿದ್ದಾರೆ. ಸಿ ಅಚ್ಯುತ ಮೆನೊನ್ 1970 ಅಕ್ಟೋಬರ್ 4ರಿಂದ 1977 ಮಾರ್ಚ್ 25ರ ತನಕ ನಿರಂತರವಾಗಿ ಒಟ್ಟು 2364 ದಿನಗಳ ತನಕ ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿದಿದ್ದರು. 1969 ನವೆಂಬರ್ 1ರಿಂದ 1970 ಆಗಸ್ಟ್ 1ರ ತನಕವೂ ಅವರು ಮುಖ್ಯಮಂತ್ರಿಯಾಗಿದ್ದರು. ಈ ಅವಧಿಯನ್ನು ನಿರಂತರವಾಗಿ ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿದ ಲೆಕ್ಕ ಪಟ್ಟಿಯಲ್ಲಿ ಒಪಡಿಸಲಾಗಿಲ್ಲ. ಅದಾದ ಎರಡು ತಿಂಗಳ ಬಳಿಕಅವರು ಮತ್ತೆ ಮುಖ್ಯಮಂತ್ರಿಯಾಗಿ ಆ ಸ್ಥಾನದಲ್ಲಿ 1977ರ ತನಕ ನಿರಂತರವಾಗಿ ಮುಂದುವರಿದಿದ್ದಾರೆ.

ದೇಶದಲ್ಲಿ ಅತೀ ಹೆಚ್ಚು ಕಾಲ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ಹೆಸರು ಸಿಕ್ಕಿಂನ ಪವನ್ ಕುಮಾರ್ ಚಾಲಿಂಗ್ ಅವರ ಹೆಸರಲ್ಲಿದೆ. ಇವರು 24 ವರ್ಷ 165 ದಿನಗಳ ತನಕ ಮುಖ್ಯಮಂತ್ರಿಯಾಗಿ ಮುಂದುವರಿದಿದ್ದರು. ಇನ್ನು 23 ವರ್ಷ 137 ದನಗಳ ತನಕ ಪಶ್ಚಿಮ ಬಂಗಾಳದಲ್ಲಿ ಆಡಳಿತ ನಡೆಸಿದ್ದ ಜ್ಯೋತಿರ್ಬಸು ನಂತರದ ಸ್ಥಾನದಲ್ಲಿದ್ದಾರೆ. ಕೇರಳದಲ್ಲಿ ಅತೀ ಹೆಚ್ಚು ಕಾಲ ಮುಖ್ಯಮಂತ್ರಿಯಾದ ಹೆಸರು ಇ.ಕೆ. ನಾಯನಾರ್ ಅವರ ಹೆಸರಲ್ಲಿದೆ. ಹಲವು ಬಾರಿಗಳಲ್ಲಾಗಿ ಒಟ್ಟು ಹತ್ತು ವರ್ಷ 353 ದಿನ (4003 ದಿನಗಳು) ಕೇರಳದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ.

## ನನ್ನನ್ನೇ ಗುರಿಯಾಗಿಸಿರುವ ಸುಗ್ರೀವಾಜ್ಞೆಗೆ ನನಗೆ ತೀರ್ಪು ನೀಡಲು ಸಾಧ್ಯವೇ?– ರಾಜ್ಯಪಾಲ

ತಿರುವನಂತಪುರ: ಕೇರಳ ಸರಕಾರ ರಾಜಭವನಕ್ಕೆ ಕಳುಹಿಸಿಕೊಟ್ಟಿರುವ ಸುಗ್ರೀವಾಜ್ಞೆಯಲ್ಲಿ ತನ್ನನ್ನೇ ಗುರಿಯಾಗಿಸುವುದರಿಂದಾಗಿ ಅದಕ್ಕೆ ನನಗೇ ತೀರ್ಪು ನೀಡಲು ಸಾಧ್ಯವೇ ಎಂದು ರಾಜ್ಯಪಾಲ ಆರಿಫ್ ಮುಹಮ್ಮದ್ ಖಾನ್ ಪ್ರಶ್ನಿಸಿದ್ದಾರೆ.

ಸುಗ್ರೀವಾಜ್ಞೆಯನ್ನು ನಾನು ಇದುವರೆಗೆ ನೋಡಿಲ್ಲ. ಅದನ್ನು ನೋಡಿದ ಬಳಿಕ ನನ್ನ ನಿರ್ಧಾರ ಪ್ರಕಟಿಸುವೆ ಎಂದು ಅವರು ಹೇಳಿದ್ದಾರೆ. ತೃಶೂರು ಕೇರಳ ಕಲಾ ಮಂಡಳಿ ಡೀಮ್ಡ್ ವಿಶ್ವ ವಿದ್ಯಾಲಯದ ಕುಲಪತಿ ಸ್ಥಾನದಿಂದ ರಾಜ್ಯಪಾಲರನ್ನು ವಜಾಗೈಯ್ಯುವ ಅಧ್ಯಾದೇಶವಾಗಿದೆ ಇದು. ನನಗೇ ಗುರಿಯಿರಿಸಿಕೊಂಡು ಈ ಆಧ್ಯಾದೇಶ ತರಲಾಗಿದ್ದರೆ, ಅದಕ್ಕೆ ನಾನೇ ತೀರ್ಪು ನೀಡಲು ಹೇಗೆ ತಾನೇ ಸಾಧ್ಯವೇ? ಅದರಿಂದಾಗಿ ಆಧ್ಯಾದೇಶವನ್ನು ಪೂರ್ಣವಾಗಿ ಪರಿಶೀಲಿಸಿದ ಬಳಿಕವಷ್ಟೇ ಅದನ್ನು ರಾಷ್ಟ್ರಪತಿಯವರಿಗೆ ಕಳುಹಿಸಿಕೊಡಬೇಕೇ ಎಂಬ ಬಗ್ಗೆ ಮುಂದೆ ನಿರ್ಧಾರ ಕೈಗೊಳ್ಳುವೆನೆಂದು ಅವರು ಹೇಳಿದ್ದಾರೆ. ರಾಜ್ಯಪಾಲರು ಈಗ ದಿಲ್ಲಿಯಲ್ಲಿದ್ದ ಅವರು ರಾಜ್ ಭವನಕ್ಕೆ ಹಿಂತಿರುಗಿದ ಬಳಿಕ ಈ ವಿಷಯದಲ್ಲಿ ಅವರು ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ.

ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿ ಆಹಾರ ಅನ್ವೇಷಣೆ, ಸಂತಾನಾಭಿವೃದ್ಧಿಗಾಗಿ ಮೈಥುನ ದೇಹದ ದಣಿವಿಗೆ ವಿಶ್ರಾಂತಿ–ಇವೇ ಹಾವುಗಳ ಜೀವನಕ್ರಮ, ಅದು ಬಿಟ್ಟು ಅವುಗಳಿಗೆ ಬೇರೆ ಗುರಿ ಇಂಗಿತಗಳಿಲ್ಲ. ಮನುಷ್ಯನ ಸುಳಿದಾಟ ಕಂಡರೆ ಹೆಜ್ಜೆ ಸದ್ದಿನ ಕಂಪನದಿಂದಲೇ ಹಾವುಗಳು ದೂರ ಹೋಗಲು ಪ್ರಯತ್ನಿಸುತ್ತವೆ. ತನಗೆ ನೇರ ಅಪಾಯ ಕಂಡು ಬಂದರೆ ಮಾತ್ರ ಹಾವು ತನ್ನ ಆತ್ಮ ರಕ್ಷಣೆಗಾಗಿ ಮಾನವನಿಗೆ ಕಡಿಯುತ್ತವೆ. ಆಮೇಲೆ ಎಲ್ಲಿಗೋ ಓಡಿ ಹೋಗುತ್ತವೆ. ಅಂದು ನಡೆದ ಘಟನೆಯನ್ನೋ, ಆ ವ್ಯಕ್ತಿಯ ಗುರುತನ್ನೋ ನೆನಪಿಟ್ಟುಕೊಳ್ಳುವಷ್ಟು ಹಾವಿನ ಮಿದುಳಿಗೆ ಸ್ಮರಣ ಶಕ್ತಿಯಿಲ್ಲ. ಇನ್ನು ಹಗೆ ಸಾಧಿಸುವಷ್ಟು ಅದರ ಮಿದುಳು ವಿಕಾಸ ಹೊಂದಿಲ್ಲ. ಹಾವಿನ ಬಗ್ಗೆ ಇರುವ ಉತ್ಪ್ರೇಕ್ಷೆಯೆಲ್ಲ ಮಾನವ ನಿರ್ಮಿತ ತಪ್ಪು ಕಲ್ಪನೆಗಳು. ಇದರಲ್ಲಿ ಎಳ್ಳಷ್ಟೂ ಹುರುಳಿಲ್ಲ.



## ಶತ್ರುವಿನ ಚಿತೆಯಹೊಗೆ ನೋಡುತ್ತಿದೆಯಂತೆ

# ಮರವೇರಿ ಕುಳಿತ ಮರಹಾವು !

ಸಾಮಾನ್ಯವಾಗಿ ಹೆಚ್ಚಿನ ಹಾವುಗಳು ಮರವೇರಬಲ್ಲವಾದರೂ ಮರಗಳಲ್ಲೇ ಸದಾ ಕಂಡುಬರುತ್ತಿರುವ ಬಡಿಗೆ ತರದ ಉದ್ದನೆ ಸಪೂರ ದೇಹದ ಕಂದುಬಣ್ಣದ ಹಾವನ್ನು ಕಂಡ ನಮ್ಮ ಪೂರ್ವಿಕರು ಅದಕ್ಕೆ ಮರದ ಹಾವು ಎಂದೇ ಹೆಸರಿಟ್ಟರು. ಮರಮರಿ, ತಾರಿಮಡಲೆ, ಬಿಲ್ಲುಮರಿ ಎಂದು ತುಳುವರು ಕರೆಯುವ ಈ ಹಾವಿಗೆ ಮಲೆಯಾಳಂನಲ್ಲಿ ಮರಪಾಂಬ್ ಎನ್ನುತ್ತಾರೆ. ಇಂಗ್ಲಿಷ್‌ನಲ್ಲಿ ಬ್ರೋನ್ಸ್ ಬ್ಯಾಕ್ ಟ್ರೀ ಸ್ನೇಕ್ (ಕಂಚು ಬೆನ್ನಿನ ಮರಹಾವು) ಎಂದು ಹೆಸರಿದೆ. ಆದರೆ ಮರದಲ್ಲಿ ಸಂಚರಿಸುವ ಹಸಿರು ಬಣ್ಣದ ಬೇರೆ ಹಾವಿಗೆ ಹಸಿರು ಹಾವು ಎನ್ನುತ್ತೇವೆ.

ಕೊಡ್ಡಿಕಣ್ಣೆ ಎಂಬ ಮೀನಿನ ತರ ಉದ್ದನೆ ತಲೆ ಹೊಂದಿರುವ ಕಂಚು ಬೆನ್ನಿನ ಮರದ ಹಾವಿನ ನಾಲಿಗೆಯು ನೀಲಿ ಬಣ್ಣವನ್ನು ಹೊಂದಿದೆ. ದೇಹದ ಎರಡೂ ಬದಿಗಳಲ್ಲಿ ಕಪ್ಪು ಬಣ್ಣದ ಗೆರೆಯು ಉದ್ದಕ್ಕೆ ಕುತ್ತಿಗೆಯಿಂದ ಬಾಲದವರೆಗೆ ಎಳೆದಂತೆ ಕಾಣುತ್ತಿದೆ. ದೇಹದ ಅಡಿಭಾಗವು ಬಿಳಿ ಇಲ್ಲವೇ ತಿಳಿ ಹಸಿರು ಬಣ್ಣದಿಂದ ಕೂಡಿದೆ. ಮರಗಳ ಪೊಟರೆಗಳಲ್ಲೇ ವಾಸಿಸುವ ಇವು ಹಗಲು ಸಂಚಾರಿಯಾಗಿದ್ದು, ಹಲ್ಲಿ, ಮರಕಪ್ಪೆ, ಓತಿಕ್ಯಾತ (ಓಂತಿ), ಕಪ್ಪೆಗಳನ್ನು ತಿಂದು ಬದುಕುತ್ತವೆ. ದೇಶದಾದ್ಯಂತ ಕಂಡುಬರುವ ಕಂಚು ಬೆನ್ನಿನ ಮರಹಾವುಗಳು ಅರಣ್ಯ ನಾಶಗೊಂಡ ಹಾಗೆ ಕಾಣಸಿಗುವುದು





• ಸತೀಶ್ ಸಾಲಿಯಾನ್, ನೆಲ್ಲಿಕುಂಜೆ

ಅಪೂರ್ವವಾಗುತ್ತಿದೆ. ಮಾನವನಿಗೆ ಅಪಾಯ ಉಂಟುಮಾಡದ ಇವು ವಿಷವಿಲ್ಲದ ಹಾವುಗಳಾಗಿವೆ.

ನಮ್ಮ ಬಾಲ್ಯದ ದಿನಗಳಲ್ಲಿ ಮನೆಯ ಸುತ್ತಮುತ್ತ ಆಗಾಗ್ಗೆ ಹಲವು ಕಂಚು ಬೆನ್ನಿನ ಮರಹಾವುಗಳು ಕಾಣಸಿಗುತ್ತಿತ್ತು. ಇತ್ತೀಚೆಗೆ ಉಪ್ಪಿನಂಗಡಿ ಬಳಿ, ಕಟೀಲಿನ ಎಕ್ಕಾರು, ಪಡುಬಿದ್ರೆಯ ಕುತ್ಯಾರು, ವಿದ್ಯಾನಗರ ಸರಕಾರಿ ಕಾಲೇಜು ಕ್ವಾಟ್ರರ್ಸ್ ಸಮೀಪ ಮರಹಾವನ್ನು ಕಂಡಿದ್ದೆ. ಈ ಹಾವುಗಳಲ್ಲಿ ಹೆಣ್ಣುಹಾವು ಗಂಡಿಗಿಂತ ದೊಡ್ಡದಾಗಿರುತ್ತವೆ ಎಂದು ಸರ್ಪಶಾಸ್ತ್ರತಜ್ಞರು ಹೇಳುತ್ತಾರೆ. ಮಿಲನ ಕಾಲದಲ್ಲಿ ಹೆಣ್ಣೊಂದನ್ನು ಸೇರಲು ಏಳೆಂಟು ಗಂಡು ಹಾವುಗಳು ಬರುತ್ತವೆಯಂತೆ. ಉಳಿದ ಹಾವುಗಳಂತೆಯೇ ಇವು ತುಂಬ ಮೊಟ್ಟೆಗಳನ್ನಿಡುವುದಿಲ್ಲ. ಕೇವಲ ಏಳೆಂಟು ಮೊಟ್ಟೆಗಳನ್ನಿಡುತ್ತವೆಯಷ್ಟೇ. ತನ್ನ ದೇಹವನ್ನು ಮರದಿಂದ ಗೆಲ್ಲಿನಂತೆ ಉದ್ದಕ್ಕೆ ಚಾಚಿಕೊಂಡು ಹಲವು ಹೊತ್ತು ನೇತಾಡಿಕೊಳ್ಳುವ ಸಾಮರ್ಥ್ಯ ಈ ಹಾವುಗಳಿಗಿವೆ. ಈ ಹಾವಿನ ತಲೆಗಿಂತಲೂ ಸಪೂರ ತಲೆಹೊಂದಿರುವ, ದುಂಡಗಿನ ದೊಡ್ಡದಾದ ಕಣ್ಣು ಹೊಂದಿರುವ ಪೈಂಟೆಡ್ ಬ್ರೋನ್ಸ್ ಬ್ಯಾಕ್ ಟ್ರೀ ಸ್ನೇಕ್ ಎನ್ನುವ ಬಣ್ಣದ ಕಂಚು ಬೆನ್ನಿನ ಮರಹಾವೆಂಬ ಇನ್ನೊಂದು ವಿಧದ ಹಾವು ಮರಹಾವಿನ ಜಾತಿಯಲ್ಲಿವೆ. ಕಂಚು ಬೆನ್ನಿನ ಮರಹಾವುಗಳ ಬಗ್ಗೆ ಇರುವ ತಪ್ಪು ಕಲ್ಪನೆಯೇ ಇಂದು ಅವುಗಳ ಸಂಖ್ಯೆ ಕಡಿಮೆಯಾಗಲು ಕಾರಣವಾಗಿವೆ.

ದೂರದಿಂದಲೇ ಯಾವುದೋ ಜೀವಿಯನ್ನು ಹಿಡಿಯಲು ಹಾರಿದಾಗ ಅದು ನಮ್ಮ ತಲೆ ಮೇಲಿಂದಾಗಿ ಕಣ್ಮುಂದೆ ಬಿದ್ದುದನ್ನು ಕಂಡು, ಆ ಹಾವು ಮನುಷ್ಯನ ತಲೆ ಮೇಲೆ ಹಾರಿ ಮನುಷ್ಯನನ್ನು ಕೊಲ್ಲಲು ಬರುತ್ತವೆ ಎಂದು ತಪ್ಪಾಗಿ ತಿಳಿದವರೂ ಇದ್ದಾರೆ. ಇದಕ್ಕೆ ನೋವುಂಟುಮಾಡಿದವರು ಸತ್ತರೆ ಅವರ ಹೆಣ ಸುಡುವಾಗ ಮೇಲೆ ಹೋಗುವ ಹೊಗೆಯನ್ನು ಈ ಹಾವು ಮರವೇರಿ ಕಂಡು ಆನಂದಿಸುತ್ತವೆ ಎಂಬ ಹುಚ್ಚು ಕಲ್ಪನೆ ಇಂದಿಗೂ ಕೆಲವರಲ್ಲಿ ಬೇರುಬಿಟ್ಟಿದೆ! ಕಂಚು ಬೆನ್ನಿನ ಮರಹಾವನ್ನು ಕೊಂದರೆ ಹಣ ಬಿದ್ದು ಸಿಗುತ್ತದೆ ಎಂಬ ಮಾತು ನಮ್ಮೂರಿನಲ್ಲಿ ಚಾಲ್ತಿಯಲ್ಲಿದ್ದ ಕಾರಣ ನನ್ನ ಬಾಲ್ಯದ ದಿನಗಳಲ್ಲಿ ಹಣದಾಸೆಯಿಂದ ಹಲವು ಮರಹಾವುಗಳನ್ನು ಕೊಲ್ಲುವುದನ್ನು ಕಂಡಿದ್ದೆ. ಹಿಂದೊಮ್ಮೆ ಈ ಹಾವನ್ನು ಕೊಂದಾಗ ಯಾರೊಬ್ಬನಿಗೂ ಐವತ್ತು ಪೈಸೆಯೋ ಬಿದ್ದು ಸಿಕ್ಕಿದ್ದನ್ನು ಹಾಗೆಯೇ ಪ್ರಚಾರ ಮಾಡಿದ್ದಿರಬೇಕು. ಆ ಮೇಲೆ ಯಾರಿಗೂ ಹಣ ಸಿಕ್ಕಿದ್ದನ್ನು ನಾನು ಕಂಡಿರಲಿಲ್ಲ. ಅದೇ ರೀತಿ ಓತಿಕ್ಯಾತ (ಓಂತಿ)ವನ್ನು ಕೊಂದು ದಾರಿಯಲ್ಲಿ ವಿಸರ್ಜನೆ ಮಾಡಿದ್ದ ಮಲದ ಮೇಲೆ ಹಾಕಿದರೆ ಹೇಲಿದ ವ್ಯಕ್ತಿಯ ಪಿಕ ಕೊಳೆಯುತ್ತದೆ ಎಂಬ ಕುರುಡು ನಂಬಿಕೆ ನಮ್ಮ ಜನರಲ್ಲಿತ್ತು! ಹೀಗೆ ಜನರ ಪೊಳ್ಳು ನಂಬಿಕೆಗೆ ಬಲಿಯಾಗುವುದು ನಿರುಪದ್ರವಿಯಾದ ಜೀವಿಗಳು.

ಇಂತಹಾ ಭಾವನೆಗಳಿಂದ ಆ ಸಾಧು ಜೀವಿಗಳ ಸಂಖ್ಯೆಯು ಕಡಿಮೆಯಾಗಿ ನಿಸರ್ಗದ ಆಹಾರ ಸರಪಣಿಯ ಕೊಂಡಿಯನ್ನು ಕಳಚುವಲ್ಲಿ ಮಾನವನು ಕಾರಣವಾಗುತ್ತಿದ್ದಾನೆ.

ಹಾವುಗಳಿಂದ ನಮಗೆ ನೇರ ಪ್ರಯೋಜನ ದೊರೆಯದಿದ್ದರಂತೂ ಪ್ರಕೃತಿಯ ಸಮತೋಲನ ಕಾಪಾಡುವುದರಲ್ಲಿ ಅವುಗಳ ಮಹತ್ತರ ಕೊಡುಗೆ ಇದ್ದೇ ಇದೆ.

ವಿಷವಿರುವ ಹಾವುಗಳಿಂದ ಮಾತ್ರ ಕೆಲವೊಮ್ಮೆ ಮನುಷ್ಯರಿಗೆ ಪ್ರಾಣ ಹಾನಿ ಸಂಭವಿಸುತ್ತದೆ. ಆದರೆ ವಿಷ ರಹಿತ ಹಾವುಗಳಿಂದ ಮಾನವನಿಗೆ ಯಾವುದೇ ತೊಂದರೆ ಉಂಟಾಗಿಲ್ಲ. ಕೃಷಿ ಬೆಳೆಗಳಿಗೆ ತೊಂದರೆ ನೀಡುವ ಕೀಟ, ಇಲಿಗಳನ್ನು ಕೊಂದು ತಿಂದು ಕೃಷಿಗೆ ಪೂರಕವಾಗಿರುವ ಹಾವುಗಳು ಇಲಿಗಳ ಸಂಖ್ಯೆಯನ್ನು ಹತೋಟಿಯಲ್ಲಿಟ್ಟು ಪ್ಲೇಗ್ ಜ್ವರ ಉಂಟಾಗದಂತೆ ಮಾಡುವುದರಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ಕ್ಯಾನ್ಸರ್‌ನಂತಹ ಮಾರಕ ರೋಗಗಳಿಗೆ ಔಷಧಿ ತಯಾರಿಸಲು ಹಾವಿನ ವಿಷವು ಸಹಕಾರಿಯಾಗಿದೆ.

# ಮಾನವಜನ್ಮ ದೊಡ್ಡದು!

ಮಾನವನನ್ನು ಜೀವಿಯ ವರ್ಗಕ್ಕೆ ಸೇರಿಸಿದ್ದು ಜೀವ ಇರುವ ಕಾರಣವಾಗಿದೆ! ಆದರೆ ಮನ ಮಿದುಳಿನ ಬಳಕೆ

ಬೇರೆ ಇದ್ದು ಮಾನವನಿಗೆ ಇತರ ಜೀವಿಯ ವರ್ಗದಿಂದ ಬೇರೆ ನಿಲ್ಲಿಸುತ್ತದೆ. ಆದರೆ ಇತರ ಜೀವಿಯ ಹಾಗೆ ಮಾನವ ಆಹಾರ ವಿಹಾರಕ್ಕೆ ಮಾತ್ರ ಸೀಮಿತ

ಗೊಳ್ಳುವುದಿಲ್ಲ. ಮಾನವ ತನ್ನ ಹಾಗೆ ಇರುವ ಮಾನವ ಕುಲದೊಡನೆ 'ಅಂತರವ್ಯೂಹದೊಳಗೆ ಯಾವಾಗಲೂ ಇರುತ್ತಾನೆ.ತನ್ನ ವ್ಯಾಪ್ತಿ ಪ್ರದೇಶದೊಳಗೆ ತನ್ನ ನಡೆ ನುಡಿಗಳನ್ನು ಇರಿಸಿ ಇತರರ ಜತೆಯು ಸಹ ಅತಿಜೀವಿಸುವ ಕಷ್ಟವೋ ಸುಖವೋ ಎಲ್ಲಬೇಕಾಗುತ್ತದೆ ಇತರ ಮಾನವರೊಡನೆ ಸಂಬಂಧಗಳು ಅದರ ಅಮಿತ ಫಲವಾಗಿರುತ್ತವೆ.

ಜೀವಿಗಳಿಗೆ ತಮ್ಮ ಮಿತವಾದ ಆಸೆ ಆಕಾಂಕ್ಷೆಗಳೆಂದರೆ ಆಹಾರವನ್ನು ಹೊಟ್ಟೆಗಿಳಿಸುವುದು ಮತ್ತು ವಿಹಾರ! ನನಗೀಗ ಹಲ್ಲಿಯೊಂದರ ಜತೆ 'ಮಿತೃತ್ವ' ಆಗಿದೆ.ಅದು ಬೆಳೆಯುತ್ತಿರುವ ಮರಿ ಹಲ್ಲಿಯಾಗಿದೆ.ಅದರ ಆಹಾರ ವೆಂದರೆ ಅತಿ ಚಿಕ್ಕ ಜೀವಿಗಳು. ಅದು ಬಿಟ್ಟರೆ ದೊಡ್ಡದಾದ ಮತ್ತು ನಮ್ಮ ಆಹಾರವನ್ನು ತಿನ್ನುವುದಿಲ್ಲ. ಅದಕ್ಕೆ ಆಯ್ಕೆ ಹೆಚ್ಚಿಗೆ ಇಲ್ಲ. ನಾನು ಬೆಳಗ್ಗೆ ಹಾಸಿಗೆಯಲ್ಲಿ ಧ್ಯಾನ ಮುದ್ರೆಯೊಡನೆ ಕುಳಿತಿರುತ್ತಿದ್ದೆ.ಆ ಹೊತ್ತು ಸೊಳ್ಳೆಗಳು ಆಚೆ ಈಚೆಯಿಂದ ಬಂದು ಕಚ್ಚುವುದು ಅದರ ನ್ಯಾಯಯುತ ಚರ್ಯೆ ಆಗಿದೆ. ನಾನು ಅದರ ಕಡಿತದಿಂದ ಪಾರಾಗಲು ಹೊಡೆದು ಕೊಂದು ಖಾಲಿ ಕಿಟಕಿ ಜಾಗದಲ್ಲಿ ಹಾಕುತ್ತಿದ್ದೆ! ಅದೇ ಹೊತ್ತಿಗೆ ಹಲ್ಲಿ ಬಂದು ನಿರೀಕ್ಷಿಸುತ್ತ ನಿಲ್ಲುತ್ತದೆ.ನಾನು ಕೊಂದ ಒಂದು ಸೊಳ್ಳೆಯ ಶವವನ್ನು ಅನತಿ ದೂರದಲ್ಲಿ ಹಾಕಿದೆ.ಅದು ಒಂದು ಅಂತರ ಕಾಯ್ದು ಕೊಂಡು ನೋಡುತ್ತ ಕೊನೆಯ ನಿಮಿಷದಲ್ಲಿ ಸೊಳ್ಳೆಯ ಶರೀರವನ್ನು ಹತ್ತಿರ ಸಾಗಿ ಗಬಕ್ಕನೆ ನುಂಗಿಬಿಟ್ಟಿತು.ಒಂದೆರಡು ಸಲ ಇದು ಆವರ್ತಿಸಿದ ಫಲವಾಗಿ ನಮ್ಮ ನಡುವೆ ಮಿತ್ರ ಸಂಬಂಧ ಬೆಳೆಯಿತು. ಅದು ಆ ಸಮಯದಲ್ಲಿ ಹಾಜರಾಗಿ ನನ್ನ ಕೊಡುಗೆ ಸ್ವೀಕರಿಸಲು ಸಿದ್ಧವಾಗಿ ನಿಲ್ಲುತ್ತದೆ. ಇದು ಪುನರಾವರ್ತನೆಯಾಗಿ ಈಗ ನನ್ನ ಕರ್ತವ್ಯವೆಂದು ಭಾವಿಸಿ ಸೊಳ್ಳೆಯನ್ನು ಕೊಂದು ಹಾಕ ತೊಡಗಿದೆ.ಹಲ್ಲಿಯು ಸೊಳ್ಳೆ ತಿನ್ನಲು



• ಹರೀಶ್ ಪೆರ್ಲ

ಯೋಗ್ಯವಾದ ಆಹಾರವೆಂದು ಬಗೆದು ದಿನಾ ಬರತೊಡಗಿತು.

ಅದು ಈಗ ನನ್ನಿಂದ ಸೊಳ್ಳೆಯ ದೇಹವನ್ನು ತಿನ್ನಲು ಕಾತರಿಸ ತೊಡಗಿತು.ಕತ್ತೆತ್ತಿ ನನ್ನೆಡೆಗೆ ನೋಡಿ ಬಿದ್ದ ಸೊಳ್ಳೆಯನ್ನು ಅದೇ ಶೈಲಿಯಲ್ಲಿ ನುಂಗುತ್ತದೆ! ಹಲ್ಲಿ ಸೊಳ್ಳೆ ಬಯಸುವ ರೀತಿಯಲ್ಲಿ ನಮ್ಮ ಬೇರೆ ಆಹಾರವನ್ನು ತಿನ್ನಲಾರದು.

ಅದಕ್ಕೆ ದೊಡ್ಡದಾದ ಏನಾದರೂ ತಿನ್ನಲು ದೈಹಿಕವಾಗಿಯೂ ಅಸಾಧ್ಯ! ಹಲ್ಲಿ ಒಂದು ಅಂತರ ಕಾಯ್ದುಕೊಂಡು, ನೋಡಿ ಕೊನೆಯ ನಿಮಿಷ ಅನ್ನುವಂತೆ ಬಿದ್ದ ಸೊಳ್ಳೆಯನ್ನು ಗಬಕ್ಕನೆ ನುಂಗಿ ಬಿಟ್ಟಿತು. ಇದೆಲ್ಲದರ ಫಲವಾಗಿ ನಮ್ಮ ನಡುವೆ ಮಿತ್ರ ಸಂಬಂಧ ಬೆಳೆಯಿತು. ದಿನಾ ಬಂದು ಅದು ನನ್ನ ಕಡೆ ಕಿಟಕಿಯಲ್ಲಿ ಕುಳಿತು ನನ್ನ ಕಡೆಗೆ ನೋಡ ತೊಡಗಿತು.ದಿನಾ ಪುನರಾವರ್ತಿತ ಕ್ರಿಯೆಯಾಗಿ, ನನಗೆ ನನ್ನ ಕರ್ತವ್ಯ ಎಂದು ಅನಿಸಿ ಸೊಳ್ಳೆಯು ಕೊಂದು ಹಾಕ ತೊಡಗಿದೆ.ಹಲ್ಲಿಯ ಆಹಾರ ವಾಗಿ ಸತ್ತ ಸೊಳ್ಳೆಯ ಭಕ್ಷಣೆ ಮುಂದುವರಿಯ ತೊಡಗಿತು.ಅದೇ ಅಭ್ಯಾಸ ಮಾಡಿ ನನ್ನ ಕೈಯಿಂದ ಬಿದ್ದ ಸೊಳ್ಳೆಯನ್ನು ತನ್ನ ಶೈಲಿಯಲ್ಲಿ ನುಂಗ ತೊಡಗಿತು.ನಂತರ ಮರುದಿನ ಅದರ ಸೋದರನೋ ಸೋದರಿಯೋ ಇದಕ್ಕೆ ದೊರಕುವ ಆಹಾರದ ಅವಕಾಶವನ್ನು ನೋಡಿ ಮೆಲ್ಲನೆ ಆಸೆಯಿಂದ ಕಿಟಕಿಯ ಮೇಲೆ ಚಲಿಸಿ ಬಂತು. ಇದನ್ನು ಕಂಡ ನನ್ನ ಸ್ನೇಹಿತ ಹಲ್ಲಿಯು ಅದರ ಹತ್ತಿರ ಹೋಗಿ ತಾಟಿ ಕ್ರೀಂ ಕ್ರೀಂ ಎಂದು ಅದನ್ನು ಗದರಿಸಿ ಓಡಿಸಿತು. ಅದರ ಪರಿಣಾಮವಾಗಿ ಆ ಹಲ್ಲಿ ನಂತರ ಪ್ರದೇಶದಲ್ಲಿ ಕಾಣಿಸಲೇ ಇಲ್ಲ.ಹಾಗೆ ಈ ಹಲ್ಲಿಯ ಏಕಸ್ವಾಮ್ಯ

ಪ್ರದೇಶವಾಗಿ ಅಲ್ಲಿ ಬಿದ್ದ ಸೊಳ್ಳೆಯ ದೇಹವನ್ನು ಕಬಳಿಸುವ ಹಕ್ಕನ್ನು ಕಾಯ್ದು ಕೊಂಡಿತು. ಹಾಗಿರುವ ಮಾನವ ಚರ್ಯೆಗಳು ಹಲ್ಲಿ ವರ್ಗದಲ್ಲೂ ಸಿಗುತ್ತವೆ. ಇದನ್ನು ಸೂಕ್ಷ್ಮವಾಗಿ ಗಮನಿಸಿ ಅದರ ಪಾಡಿಗೆ ಬಿಟ್ಟು ಸೊಳ್ಳೆಯು ನನ್ನ ಬಳಿ ಸುಳಿದಾಗ ಅದರ ಆಹಾರ

ಒದಗಿಸುವ ಕಜ್ಜ ಮುಂದುವರಿಸಿದೆ.ಅದಕ್ಕೆ ತೃಪ್ತಿಯೋ ಅಲ್ಲ ಸಂತೋಷ ಆಗಿದೆ ಎಂದು ಕೊಳ್ಳಲು ನಮಗೆ ಏನೂ ಕಾಣುವುದಿಲ್ಲ.ಅದು ತಲೆ ಸ್ವಲ್ಪ ಎತ್ತಿ ಬಾಲವನ್ನು ಉರುಟಾಗಿಸಿ ಚಲಿಸುವುದು ಇವಿಷ್ಟೇ ತೋರಿಸುವ ಭಾವನೆಗಳು ಎಂದು ತಿಳಿಯಲು ಸಾಧ್ಯವಾಯಿತು. ಮಾನವನು ತನ್ನ ಉಗಮ ಕಾಲದ ನಂತರ ಅದೇ ರೀತಿ ಇದ್ದವನು. ಆಗ ಹೊಟ್ಟೆ ಹಸಿವೆಗೆ ಲಭ್ಯ ರೀತಿಯಲ್ಲಿ ತಿನ್ನುವ ಮೂಲಕ ಹಿಂಗಿಸಿಕೊಳ್ಳುತ್ತಿದ್ದನು. ಬೇಯಿಸಿದ್ದಲ್ಲ!

ಬೇಕಾದದ್ದು ಸಿಗದೆ ಹೋಗುವುದು ಸಾಮಾನ್ಯವಾಗಿತ್ತು. ಆಗ ಹೊಟ್ಟೆ ಹೊರೆದುಕೊಳ್ಳುವ ಯೋಚನೆ ಮಾತ್ರ ಇರುತ್ತಿತ್ತು. ತನ್ನದೇ ಹೊಟ್ಟೆ ತುಂಬಿಸುವ ಕಾರ್ಯದಿಂದ ಹಲ್ಲಿ ತರ ಇತರ ಮಾನವರನ್ನು ಕ್ರೀಂ ಕ್ರೀಂ ಎಂದು ಓಡಿಸಿ ತನ್ನ ಆಹಾರ ಎಂದು ಖಾತರಿ ಪಡಿಸಿರಬಹುದು!ಈಗಿನ ಮಾನವ ವರಸೆ ಎಂದರೆ ಆಹಾರದ ವಿವಿಧ ರೀತಿಯದನ್ನು ಬೆರೆಸಿ,ಬಿಸಿ ಮಾಡಿ ಬೇಯಿಸಿ ತಣಿಸಿ ತಿನ್ನುವ ಹವ್ಯಾಸಿ! ನಾಲಗೆ ಅದಕ್ಕೆ ಒಗ್ಗಿ ಕೊಂಡಿರುತ್ತದೆ. ರುಚಿ ಎಂಬುದು ಮಾನವನಿಗೆ ಮಾತ್ರ ಸೀಮಿತ. ಆದರೆ ಮಾನವನ ಈಗಣ ಸಹವಾಸ ದೋಷ ಕಾಣಿಸಿ ನಾಯಿ ಬೆಕ್ಕು ಸಾಕು ಪ್ರಾಣಿಗಳು ತಮ್ಮ ಆಹಾರ ವೈವಿಧ್ಯಮಯವಾಗಿಸಿ ಕೊಂಡಿವೆ.

ಈಗ ಮಾನವನಿಗೆ ಸಹಜೀವಿಗಳ ಕಡೆ ನೋಡಲು ಬಿಡುವಿಲ್ಲದೆ ಅದು ಜೀವನದಲ್ಲಿ ಸಲ್ಲದ ನಡೆಯಾಗಿದೆ. ಹಾಗೆ ಕೆಲವು ವೇಳೆ ತಾನು ಇತರ ಜೀವಿಗಳ ಒಡನಾಟದಲ್ಲಿ ನಿರೀಕ್ಷಿತವಾದುವುಗಳು ಸಂಭವಿಸಿದರೂ ಮರೆತು ಹೋಗುವ ,ಅಲ್ಲ ಸಹಜವೆನ್ನುವಂತೆ ಪರಿಗಣಿಸುವ ಗುಣ ಬೆಳೆದಿದೆ.ಅದನ್ನು ತನ್ನ ಜೀವನದ ಭಾಗವಾಗಿ ಸ್ವೀಕರಿಸುವುದೇ ಇಲ್ಲ ಎಂದು ಕೊಳ್ಳುತ್ತಾರೆ.ಆದರೆ ಕೆಲವು ವೇಳೆ ,ಮಾನವರು ಪ್ರಾಣಿಗಳಿಂದ ಆಕಸ್ಮಿಕವಾಗಿ ನಡೆಯುವ ಆಘಾತ ಹಲ್ಲೆಗಳು ಅದನ್ನು ಶತ್ರು ಆಕ್ರಮಣ ಎಂದು ತೆಗೆದು ಕೊಂಡು ಅದನ್ನು ಎದುರಿಸಲು ನಿವಾರಣ ಕ್ರಮಗಳನ್ನುತೆಗೆದು ಕೊಳ್ಳುತ್ತಾನೆ.

## ಮಕ್ಕಳಿಗಾಗಿ

### ವಿದ್ಯಾಲಯವೇ ದೇಗುಲ

ನಗರದ ಮಧ್ಯೆ ನೀ
ತಲೆಯೆತ್ತಿ ನಿಂತಿರುವೆ
ವಿದ್ಯೆಯನು ಪಸರಿಸುವ ಓ ದೇಗುಲವೇ...
ಆಟದ ಜೊತೆ ಪಾಠವನ್ನು
ಅರಿಯದಂತೆ ತಿಳಿಸಿರುವೆ
ಅಚ್ಚರಿಯ ಮೂಡಿಸಿ ಸಾಗಿಸುತಿರುವೆ
ವಿಧ ವಿಧದ ಭಕ್ತರನ್ನು
ಕೈ ಬೀಸಿ ಕರೆವ ದೇವ
ನೀನಿಲ್ಲಿ ವರವನ್ನು ನೀಡುತ್ತಿರುವಿ
ನಮ್ಮ ಬಾಳ ಪಯಣದಲ್ಲಿ
ಹೊಸದಾದ ಸ್ಮೃತಿಯ ಸೃಷ್ಟಿಸಿ
ಚಿರಕಾಲ ಮನದಲ್ಲೇ ಉಳಿದಿರುವೆ

– ಕೆ. ಶಿವಾನಿ, 10ನೇ ತರಗತಿ, ಜಿಎಚ್‌ಎಸ್‌ಎಸ್ ಪೈವಳಿಕೆನಗರ

### ಸೂರ್ಯೋದಯ

ಕಿತ್ತಳೆ ಬಣ್ಣದ ಕಿರಣವ ಬೀರುತ
ಪೂರ್ವದಿ ಬಂದನು ದಿನಕರನು
ನಗುವನು ಬೀರಿ ಹುಮ್ಮಸ್ಸು ನೀಡಿ
ಚೆಲುವನು ಬೀರಿದ ದಿನಕರನು
ಹಾರುವ ಹಕ್ಕಿಯ ಸೊಬಗನು ನೋಡುತ
ಸಂತಸದಿಂದ ನಗುತಿಹನು
ಉದಯದ ಸಮಯದಿ ಅರಳುವ ಹೂವನು
ನೋಡುತ ಸೂರ್ಯನು ಬೆರಗಿದನು
ಜುಳು ಜುಳು ಹರಿಯುವ ನೀರು
ಸೂರ್ಯನ ಕಿರಣಕೆ ಹೊಳಪಾಯ್ತು
ಜೇನನು ಹೀರುವ ಚಿಟ್ಟೆಯ ಕಂಡು
ಸೂರ್ಯನು ನಗುತಿಹನು

–ಸಹನಾ ಕೆ, 8ನೇ ತರಗತಿ ಜಿಎಚ್‌ಎಸ್ ಸೂರಂಬೈಲು



–ಲಕ್ಷಿತ್, 2ನೇ ತರಗತಿ, ಎಸ್.ಆರ್.ಎ.ಯು.ಪಿ.ಎಸ್. ಕುಬಣೂರು



–ಇತಿಶ್ ಎಸ್. 8ನೇ ತರಗತಿ, ಜಿಎಚ್‌ಎಸ್‌ಎಸ್ ಪೈವಳಿಕೆನಗರ



–ಮೋಕ್ಷಿತ್ ಯು. 4ನೇ ತರಗತಿ, ಜಿಎಚ್‌ಎಸ್ ಸೂರಂಬೈಲು

# ರಾಜ್ಯದ ಶೇ. 72ರಷ್ಟು ರೈತರು ಸಾಲದ ಕೂಪದಲ್ಲಿ

ಕಾಸರಗೋಡು: ರಾಜ್ಯದ ರೈತರ ಪೈಕಿ ಶೇ. 72ರಷ್ಟು ಮಂದಿ ವಿವಿಧ ಸಾಲಗಳ ಕೂಪದಲ್ಲಿ ಸಿಲುಕಿಕೊಂಡಿದ್ದಾರೆಂದು ಸ್ವತಂತ್ರ ರೈತ ಸಂಘಟನೆಯಾದ ಕೇರಳ ಇಂಡಿಪೆಂಡೆಂಟ್ ಫಾರ್ಮರ್ಸ್ ಅಸೋಸಿಯೇಶನ್ (ಕಿಫಾ) ನಡೆಸಿದ ಸಮೀಕ್ಷೆಯಲ್ಲಿ ಗುರುತಿಸಲಾಗಿದೆ.

ಪ್ರತೀ ರೈತರು ಸರಾಸರಿ ತಲಾ 5.46 ಲಕ್ಷ ರೂ.ಗಳ ಸಾಲದ ಹೊರೆ ಯಲ್ಲಿದ್ದಾರೆ. 2019ರಲ್ಲಿ ನಡೆಸಲಾದ ರಾಷ್ಟ್ರೀಯ ಸ್ಯಾಂಪಲ್ ಸಮೀಕ್ಷೆ ಪ್ರಕಾರ ಕೇರಳದಲ್ಲಿ ಶೇ. 70ರಷ್ಟು ರೈತರು ಸಾಲದ ಹೊರೆಯಲ್ಲಿದ್ದಾರೆ. ಅಂದು ಪ್ರತಿ ರೈತರ ಸಾಲದ ಹೊರೆ ಸರಾಸರಿ 2.42 ಲಕ್ಷ ರೂ. ಆಗಿತ್ತು. ಕಿಫಾ ಸಮೀಕ್ಷೆ ಪ್ರಕಾರ ಈಗ ಸಾಲ ಹೊರೆ ದರದಲ್ಲಿ ಶೇ. 20ರಷ್ಟು ಹೆಚ್ಚಿದ್ದು, ಅದರಿಂದಾಗಿ ಮೂರು ವರ್ಷದಲ್ಲಿ ಸರಾಸರಿ ಸಾಲದ ಹೊರೆ ಇಮ್ಮಡಿಯಾಗಿದೆ.

ಉತ್ತರ ಕೇರಳದಲ್ಲಿ ಅತೀ ಹೆಚ್ಚಿನ ರೈತರು ಸಾಲದ ಹೊರೆಯಲ್ಲಿದ್ದಾರೆ. ಅಂದರೆ ಶೇ. 77ರಷ್ಟು ರೈತರು ಸಾಲದ ಕೂಪದಲ್ಲಿದ್ದಾರೆ. ತೆಂಕು ಜಿಲ್ಲೆಗಳಲ್ಲಿ ಶೇ. 70 ಹಾಗೂ, ಮಧ್ಯ ಕೇರಳದಲ್ಲಿ ಶೇ. 68, ರೈತರು ಸಾಲದ ಹೊರೆ ಎದುರಿಸುತ್ತಿದ್ದಾರೆ.

ಏಲಕ್ಕಿ, ಅನಾನಸು ಹಾಗೂ ಹೈನುಗಾರಿಕಾ ಕೃಷಿಕರೇ ಅತೀ ಹೆಚ್ಚು ಸಾಲ ಹೊಂದಿದವರಾಗಿದ್ದಾರೆ. ಕಿಸಾನ್ ಕ್ರೆಡಿಟ್ ಕಾರ್ಡ್ ಮೂಲಕ ಸಾಲ ಪಡೆದವರಲ್ಲಿ ಶೇ. 48 ರೈತರು ಒಳಗೊಂಡಿದ್ದಾರೆ. ಇದೇ ವೇಳೆ ರೈತರಿಗೆ ಸಾಲ ನೀಡಲು ಹೆಚ್ಚಿನ ಬ್ಯಾಂಕ್‌ಗಳು ಹಿಂದೇಟು ಹಾಕುತ್ತಿವೆ ಎಂದು ಸಮೀಕ್ಷೆ ವರದಿಯಲ್ಲಿ ಹೇಳಲಾಗಿದೆ. ಶೇ. 21ರಷ್ಟು ರೈತರು ಕೃಷಿಸಾಲಕ್ಕಾಗಿ ಖಾಸಗಿ ಹಣಕಾಸು ಸಂಸ್ಥೆಗಳನ್ನು ಆಶ್ರಯಿಸುತ್ತಿದ್ದಾರೆ.

ಹೀಗೆ ಸಾಲ ಪಡೆದ ಶೇ. 14ರಷ್ಟು ರೈತರು ಈಗ ಜಪ್ತಿ ಕ್ರಮ ಎದುರಿಸುತ್ತಿದ್ದಾರೆ. ಶೇ. 2ರಷ್ಟು ಮಂದಿ ಈಗಾಗಲೇ ಜಪ್ತಿ ಕ್ರಮ ಕ್ಕೊಳಗಾಗಿದ್ದಾರೆ. 1572 ರೈತ ಕುಟುಂಬಗಳನ್ನು ಸಂದರ್ಶಿಸಿ ಆ ಮೂಲಕ ಈ ಸಮೀಕ್ಷೆ ನಡೆಸಲಾಗಿದೆ. ಒಂದಕ್ಕಿಂತ ಹೆಚ್ಚು ಸಾಲ ಹೊಂದಿದವರು ಶೇ. 26ರಷ್ಟು ಮಂದಿ ರೈತರಿದ್ದಾರೆ. ತಮ್ಮ ಭೂಮಿಯನ್ನು ಅಡವಿರಿಸಿ ಶೇ. 65ರಷ್ಟು ಮಂದಿ ಸಾಲ ಪಡೆದಿದ್ದಾರೆ. ಮನೆ ಅಡವಿರಿಸಿ ಶೇ. 57, ಚಿನ್ನ ಅಡವಿರಿಸಿ ಶೇ. 68 ಮಂದಿ ಸಾಲ ಪಡೆದಿದ್ದಾರೆ.

ಶೇ. 16ರಷ್ಟು ಮಂದಿ 10 ಲಕ್ಷ ರೂ.ಗಿಂತ ಹೆಚ್ಚು ಸಾಲ ಪಡೆದಿದ್ದಾರೆ. ಸೇ. 51ರಷ್ಟು ಮಂದಿ ಸರಿಯಾದ ರೀತಿಯಲ್ಲಿ ಸಾಲ ಮರು ಪಾವತಿಸುತ್ತಿದ್ದಾರೆ. ಶೇ. 20ರಷ್ಟು ಮಂದಿ ಪೂರ್ಣವಾಗಿ ಸಾಲ ಮರು ಪಾವತಿ ಮಾಡಿದ್ದಾರೆ. ಸಾಲ ಪಡೆದ ಕೆಲವು ಕಂತುಗಳು ಮಾತ್ರವೇ ಪಾವತಿಸಲು ಬಾಕಿ ಇರುವ ಶೇ. 29 ಮಂದಿ ರೈತರು ಈ ಯಾದಿಯಲ್ಲಿ ಒಳಗೊಂಡಿದ್ದಾರೆಂದು ಸಮೀಕ್ಷೆಯಲ್ಲಿ ಹೇಳಲಾಗಿದೆ.